ದಿನಾಂಕ 25-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ಶ್ರೀ ಎಫ್.ಬಿ.ಎಂ ವಕೀಲರಿಂದಃ**

8. ಪರವಾನಿಗೆಯನ್ನು ಕೊನೆಗೊಳಿಸಲಾಗಿದೆ ಎಂದು ಸಲ್ಲಿಸಿದ್ದ ನೋಟೀಸು ನನಗೆ ಮತ್ತು ಉಳಿದ ಪ್ರತಿವಾದಿಯರಿಗೆ ಖುದ್ದಾಗಿ ಜಾರಿ ಆಗಿರುತ್ತದೆ ಎಂದರೆ ಸರಿ. ಸದರಿ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಈ ದಾವೆಯನ್ನು ನಡೆಸಲು ಮೊದಲಿಗೆ ಶ್ರೀ ಜಿ.ವಿ.ಕೆ ವಕೀಲರ ಬಳಿ ಅಧಿಕಾರ ಪತ್ರವನ್ನು ನೀಡಿದ್ದು, ಅವರು ದಾವೆ ಚಾಲ್ತಿಯಲ್ಲಿದ್ದಾಗ ಮರಣ ಹೊಂದಿರುತ್ತಾರೆ. ನಮ್ಮ ಪರವಾಗಿ ದಾವೆ ನಡೆಸುವಂತೆ ಸದರಿ ವಕೀಲರಿಗೆ ನಾನು ಮತ್ತು ಉಳಿದ ಪ್ರತಿವಾದಿಯರು ಸಹಿ ಮಾಡಿದ ವಕಾಲತನ್ನು ನೀಡಿದ್ದೆವು. ಅವರು ನಮ್ಮ ಪರವಾಗಿ ಈ ದಾವೆಯಲ್ಲಿ ಹಾಜರಾಗಿದ್ದೀರಿ ಎಂದು ಅವರನ್ನು ವಿಚಾರಿಸಿದ್ದು, ಅದಕ್ಕೆ ಅವರು ಹಾಜರಾಗಿದ್ದೇನೆ ಎಂದು ನನಗೆ ತಿಳಿಸಿದ್ದರು. ಈ ಪ್ರಕರಣದಲ್ಲಿ ಶ್ರೀ ಜಿ.ವಿ.ಕೆ ವಕೀಲರು ನನ್ನ ಮತ್ತ ಉಳಿದ ಪ್ರತಿವಾದಿಯರ ಪರವಾಗಿ ಹಾಜರಾಗಿರುವುದಿಲ್ಲ ಮತ್ತು ಹಾಜರಾಗುವಂತೆ ನಾವು ಅವರಿಗೆ ವಕಾಲತನ್ನು ಸಹಿ ಮಾಡಿ ನೀಡಿರುವುದಿಲ್ಲ ಎಂದರೆ ಗೊತ್ತಿಲ್ಲ.

9. ನಿ.ಡಿ-9 ರ ಪ್ರತ್ಯುತ್ತರ ನೋಟೀಸಿಗೆ ಜಿ ವಿ ಕೆ ವಕೀಲರು ನನ್ನ ಸಹಿಯನ್ನು ಮಾತ್ರ ಪಡೆದಿದ್ದರು. ನಿ.ಡಿ-9 ರ ಪ್ರತ್ಯುತ್ತರ ನೋಟೀಸನ್ನು ಸಾಕ್ಷಿಗೆ ತೋರಿಸಿದಾಗ ಅದರಲ್ಲಿ ತನ್ನ ಸಹಿಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಕೀಲರು ನೀಡಿದ್ದ ಪ್ರತ್ಯುತ್ತರ ನೋಟೀಸಿನ ಪ್ರತಿಯನ್ನು ನಾನು ಅವರಿಂದ ಪಡೆದುಕೊಂಡಿರುವುದಿಲ್ಲ. ಪ್ರತ್ಯುತ್ತರ ನೋಟೀಸನ್ನು ಕಳಿಸಿದ್ದರೆ, ಅಂಚೆ ರಸೀದಿ ಮತ್ತು ಸ್ವೀಕೃತಿಗಳು ಇರುತ್ತಿದ್ದವು ಎಂದರೆ ಗೊತ್ತಿಲ್ಲ. ನಾನು ನಿ.ಡಿ-9 ರಂತೆ ಪ್ರತ್ಯುತ್ತರ ನೋಟೀಸನ್ನು ಶ್ರೀ ಜಿ ವಿ ಕೆ ವಕೀಲರಿಗೆ ವಾದಿಗಾಗಲೀ ಅಥವಾ ವಕೀಲರಿಗಾಗಲೀ ನೀಡುವಂತೆ ನಿರ್ದೇಶಿಸದಿದ್ದರೂ, ಅವರು

ಮರಣ ಹೊಂದಿದ ದುರುಪಯೋಗಪಡಿಸಿ



ಕೊಂಡು ಮತ್ತು ಅವರ ಸಹಿಯನ್ನು ಫೋರ್ಜರಿ ಮಾಡಿ ನಿ.ಡಿ-9 ರ ಸುಳ್ಳು ಪ್ರತ್ಯುತ್ತರವನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

10. ಅನ್ನಪೂರ್ಣ ರವರು, ಆಕೆಯ ತಾಯಿ ಮತ್ತು ಸಹೋದರಿಯಾದ ಈ ದಾವೆಯ ವಾದಿಯ ವಿರುದ್ದ ಉತ್ತಮ ಬಾಂಧವ್ಯ ಇಲ್ಲದೇ ಇರುವ ಕಾರಣಕ್ಕೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಹಿಸ್ಸಾ ದಾವೆಯನ್ನು ಈ ಪ್ರಸ್ತುತ ದಾವಾ ಆಸ್ತಿ ಒಳಗೊಂಡಂತಹ ಸ ನಂಃ 90 ಅ/6 ರ ಜಮೀನಿಗೆ ಹಾಗೂ ಇತರ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿದ್ದಳು ಎಂದರೆ ಗೊತ್ತಿಲ್ಲ. ಸದರಿ ದಾವೆಯ ಸಂಃ718/2002 ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಆದ ರಾಜೀಯ ಪ್ರಕಾರ ದಾವಾ ಆಸ್ತಿಯನ್ನು ಒಳಗೊಂಡ ಸ ನಂಃ 90 ಅ/6 ರ ಜಮೀನು ಪ್ರಸ್ತುತ ವಾದಿಯ ಹಿಸ್ಸೇಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯನ್ನು ವಾದಿಯು ತನ್ನ ಸಹೋದರಿ ಮತ್ತು ತಾಯಿಯೊಂದಿಗೆ ಜೊತೆಗೂಡಿ ನನಗೆ ಮಾರಾಟ ಮಾಡಿದ ಬಗ್ಗೆ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

11. ವಾದಿಯಾಗಲೀ, ಆಕೆಯ ಸಹೋದರಿ ಅನ್ನಪೂರ್ಣ ಮತ್ತು ತಾಯಿ ನಿಂಬವ್ವ ರವರು ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆ ಎಂದು ಒಪ್ಪಿ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಮತ್ತು ಪ್ರತಿಫಲದ ಹಣವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಧರಿಸಿರುವಂತೆ ದಿಃ 08-05-1999 ರಂದು ದಾವಾ ಆಸ್ತಿಯ ಸ್ವಾಧೀನವನ್ನು ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 08-05-1999 ರ ಸುಳ್ಳು ಆಧರಿಸಿರುವ ಖರೀದಿ ಸಂಚಕಾರ ಪತ್ರದಲ್ಲಿ ವಾದಿ ಆಕೆಯ ಸಹೋದರಿ ಮತ್ತು ತಾಯಿಯ ಸಹಿಗಳನ್ನು ಫೋರ್ಜರಿ ಮಾಡಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

12. ದಿಃ 08-05-1999 ರಿಂದಲೇ ನಾನು ದಾವಾ ಆಸ್ತಿಯ ಮಾಲೀಕನು ಇರುತ್ತೇನೆ. ಸದರಿ ದಿನಾಂಕದಿಂದ ವಾದಿ, ಆಕೆಯ ಸಹೋದರಿ ಮತ್ತು ತಾಯಿ



ಮಾಲೀಕರು ಇರುವುದಿಲ್ಲ. ಸದರಿ ಹಿಂದಿನ ದಾವೆಯಲ್ಲಿ ಆದ ರಾಜೀ ಡಿಕ್ರಿಯ ಪ್ರಕಾರ, ಡಿಕ್ರಿ ಆದ ದಿನಾಂಕದಿಂದಲೂ ಇಂದಿಗೂ ಸಹ ವಾದಿಯೇ ದಾವಾ ಆಸ್ತಿಯ ಮಾಲೀಕಳು, ಕಬ್ಜೆದಾರಳು ಎಂದರೆ ಸರಿಯಲ್ಲ.

13. ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ವರ್ಗಾಯಿಸಲು ವಾದಿಯು ಕಬುಲಿ ವರದಿಯನ್ನು ನೀಡಿರುತ್ತಾಳೆ. ಸದರಿ ದಾಖಲೆಯನ್ನು ಈಗಾಗಲೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಖಾತೆ ವರ್ಗಾವಣೆ ಆದ ಬಗ್ಗೆ ಗ್ರಾಮ ಪಂಚಾಯಿತಿಯಲ್ಲಿ ಠರಾವು ಆಗಿರುತ್ತದೆ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಒಂದು ವೇಳೆ ಠರಾವು ಆಗಿದ್ದರೆ ಮತ್ತು ಕಬುಲಿ ವರದಿ ನೀಡಿದ್ದರೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ವಾದಿಯ ತಾಯಿ ದಾವಾ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡುವಂತೆ ಎಂದಿಗೂ ಕಬುಲಿ ವರದಿ ನೀಡಿಲ್ಲ ಮತ್ತು ಅದರಂತೆ ಠರಾವು ಆಗಿರುವುದಿಲ್ಲ ಎಂದರೆ ಸರಿಯಲ್ಲ.

14. ನಾನು ಆಧರಿಸಿರುವ ವಿಪಿಸಿ ಆಸ್ತಿ ಸಂಃ 502 ದಾವಾ ಆಸ್ತಿಗೆ ಸಂಬಂಧಪಟ್ಟ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಮನೆಯನ್ನು ಕಟ್ಟಿದ ನಂತರ ಖಾಲಿ ಇದ್ದ ಕಾರಣಕ್ಕೆ ಅದನ್ನು ಮಾಸಿಕ ರೂ.1500/- ಗಳಂತೆ ಪರವಾನಿಗೆ ಆಧಾರದ ಮೇಲೆ ದಿಃ 26-01-2017 ರಿಂದ ಉಳಿದುಕೊಳ್ಳಲು ನನಗೆ ನೀಡಿದ್ದರು ಎಂದರೆ ಸರಿಯಲ್ಲ. ನಂತರ ದಿಃ 26-10-2018 ರವರೆಗೆ ಸದರಿ ಮಾಸಿಕ ಬಾಡಿಗೆಯನ್ನು ನೀಡುತ್ತಾ ಬಂದಿದ್ದು, ನಂತರದಲ್ಲಿ ಬಾಡಿಗೆಯನ್ನು ನೀಡುವುದನ್ನು ನಿಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ವಾದಿಯು ಪರವಾನಿಗೆಯನ್ನು ರದ್ದುಪಡಿಸಿ ದಿಃ 19-02-2019 ರಂದು ವಕೀಲರ ಮೂಲಕ ನೋಟೀಸನ್ನು ನೀಡಿ

ದಾವಾ ಆಸ್ತಿಯನ್ನು ಖಾಲಿ ಮಾಡುವಂತೆ ಮತ್ತು ಉಳಿಕೆ ಬಾಡಿಗೆ ಹಣವನ್ನು ನೀಡುವಂತೆ ಒತ್ತಾಯಿಸಿದ್ದರು ಎಂದರೆ ಸರಿಯಲ್ಲ.

15. ನಾನು ಅಜ್ಜನ ಕಾಲದಿಂದಲೂ ಹೋತನಹಳ್ಳಿಯಲ್ಲಿ ಖಾಯಂ ಆಗಿ ವಾಸ



ಇದ್ದೇನೆ. ಹೋತನಹಳ್ಳಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ನನ್ನ ಅಜ್ಜನ ಕಾಲದಿಂದಲೂ ಸ್ವಂತ ಮನೆ ಇತ್ತು. ಸದರಿ ಮನೆಯು ನನ್ನ ಅಣ್ಣನ ಹೆಸರಿಗೆ ಖಾತೆ ಆಗಿದೆ. ಆ ಆಸ್ತಿಯಲ್ಲಿ ನಾನು ಹಿಸ್ಸೇಯನ್ನು ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು, ನನ್ನ ಹಿಸ್ಸೇಯ ಅನುಗುಣವಾಗಿ ಬಂದ ಹಣದಿಂದಲೇ ದಾವಾ ಆಸ್ತಿಯನ್ನು ಖರೀದಿಸಲು ಸಂಚಕಾರ ಪತ್ರ ಮಾಡಿಕೊಂಡಿದ್ದೆ ಎಂದು ನುಡಿಯುತ್ತಾರೆ. ಸದರಿ ಮನೆಯ ವಿಪಿಸಿ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಕೃಷಿ ಜಮೀನು ಇರುವುದರಿಂದ ನಾನು ಆಧರಿಸಿರುವಂತೆ ಅದಕ್ಕೆ ವಿಪಿಸಿ ಆಸ್ತಿ ಸಂಃ 252 ಎಂದು ಸಂಖ್ಯೆಯನ್ನು ನೀಡಲು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿಯು ದಾವಾ ಜಮೀನಿನಲ್ಲಿ ಈಗಾಗಲೇ 26 ಪ್ಲಾಟುಗಳು ಆಗಿರುವುದರಿಂದ ಗ್ರಾಮ ಪಂಚಾಯಿತಿರವರು ವಿಪಿಸಿ ಸಂಖ್ಯೆಗಳನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ದಿಃ 08-05-1999 ರಂತೆ ನಾನು ಆದರಿಸಿರುವ ಖರೀದಿ ಕರಾರಿನ ಆಧಾರದ ಮೇಲೆ ದಾವಾ ಆಸ್ತಿಯ ಖರೀದಿ ಪತ್ರವನ್ನು ಬರೆದುಕೊಡುವಂತೆ ದಾವೆಯನ್ನು ಇತ್ತೀಚೆಗೆ ಸಲ್ಲಿಸಿರುತ್ತೇನೆ. ಸಾಕ್ಷಿ ಮುಂದುವರೆದು ವಾದಿ ಮತ್ತು ನಾವು ಹತ್ತಿರದ ಸಂಬಂಧಿಗಳು ಇರುವುದರಿಂದ ಅವರಿಗೆ ಸಂಪೂರ್ಣ ಹಣವನ್ನು ನೀಡಿದ್ದು, ಅದರ ನಂಬಿಕೆಯ ಆಧಾರದ ಮೇಲೆ ಈ ದಾವೆಯನ್ನು ಸಲ್ಲಿಸಿದ ನಂತರ ಸಮನ್ಸ ಜಾರಿ ಆಗುವವರೆಗೂ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಂಪೂರ್ಣ ಹಣ ಪಾವತಿ ಮಾಡಿದ ಬಗ್ಗೆ ರಸೀದಿ ಪಡೆದಿದ್ದೀಯಾ ಎಂಬ ಪ್ರಶ್ನೆಗೆ

ಸಾಕ್ಷಿಯು ನಂಬಿಕೆ ಆಧಾರದ ಮೇಲೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ ದಾಖಲಿಸಿರುತ್ತೇನೆ. ಸದರಿ ದಾವೆಯ ಸಂಖ್ಯೆ ಮತ್ತು ಅದನ್ನು ಸಲ್ಲಿಸಿದ ದಿನಾಂಕ ನೆನಪಿಲ್ಲ. ಇದುವರೆಗೂ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕರಾರಿನ ಪ್ರಕಾರ ಉಳಿದ ಬಾಕಿ ಹಣವನ್ನು ಪಡೆದುಕೊಂಡು ನೋಂದಾಯಿತ ಖರೀದಿ ಪತ್ರವನ್ನು ಬರೆದುಕೊಡುವಂತೆ ಯಾವುದೇ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

-17-

17. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ನನ್ನ ರಾಜಕೀಯ ಪ್ರಭಾವ ಬೀರಿ ಪಂಚಾಯಿತಿ ಅಧಿಕಾರಿಗಳೊಂದಿಗೆ ಮಿಲಾಪಿ ಆಗಿ ಮೋಸದಿಂದ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 26-10-2018 ರಿಂದ ಇಲ್ಲಿಯವರೆಗೂ ಉಳಿಕೆ ಪರವಾನಿಗೆ ಆಧಾರದ ಮೇಲೆ ಇರುವ ಬಾಡಿಗೆ ಹಣವನ್ನು ವಾದಿಗೆ ನೀಡಲು ಹಾಗೂ ದಾವಾ ಆಸ್ತಿಯ ಸ್ವಾಧೀನವನ್ನು ನೀಡಲು ಬಾಧ್ಯಸ್ಥನಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಎಲ್ಲಾ ಸಂಗತಿಗಳು ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ